ಈ ಬಗ್ಗೆ ಆಲೋಚನೆಯನ್ನು ಮಾಡುತ್ತಿಲ್ಲ. ಅಲ್ಲದೇ ಈಗಾಗಲೇ ಪುರಸಭೆಗಳಿಗೆ ೨೯ನೇ ಏಪ್ರಿಲ್ ೧೯೯೦ ರಂದು ಚುನಾವಣೆ ಎಂದು ಘೋಷಣೆಯನ್ನು ಮಾಡಿರುವುದರಿಂದ ಈ ವಿಚಾರವನ್ನು ಸರ್ಕಾರ ಪುನಃ ಆಲೋಚನೆ ಮಾಡಲಿಕ್ಕೆ ಸದ್ಯದ ಮಟ್ಟಿಗೆ ಆಗುವುದಿಲ್ಲ.

೪. ನೀರಾವರಿ ದರವನ್ನು ಹೆಚ್ಚಿಸಿರುವುದರಿಂದ ಸಣ್ಣ ಅತಿಸಣ್ಣ ರೈತರಿಗೆ ತೊಂದರೆಯಾಗಿರುವುದು.

ಶ್ರೀ ಎಂ. ಮಹದೇವ್ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ನೀರಾವರಿ ಜಮೀನಿಗೆ ಎಕರೆ ಒಂದಕ್ಕೆ ವರ್ಷಕ್ಕೆ ಭತ್ತಕ್ಕೆ ಹಿಂದೆ ಇದ್ದ ರೂ. ೪೦.೦೦ ದರವನ್ನು ರೂ ೧೦೦.೦೦ಗೆ ಹೆಚ್ಚಿಸಿರುವುದರಿಂದಲೂ ಮತ್ತು ಕಬ್ಬಿಗೆ ಎಕರೆ ಒಂದಕ್ಕೆ ಹಿಂದೆ ಇದ್ದರೂ. ೧೫೦-೦೦ ದರವನ್ನು ರೂ. ೪೦೦-೦೦ಕ್ಕೆ ಹೆಚ್ಚಿಸಿ ದಿನಾಂಕ ೧-೧-೧೯೯೦ರಿಂದ ಜಾರಿಗೆ ಬರುವಂತೆ ಹೊರಡಿಸಿರುವ ಸರ್ಕಾರಿ ಆದೇಶದಿಂದ ಸಣ್ಣ, ಅತಿ ಸಣ್ಣ ಹಾಗೂ ಮಧ್ಯಮ ವರ್ಗದ ರೈತರಿಗೆ ತುಂಬಾ ತೊಂದರೆಯಾಗಿರುವುದರಿಂದ ಹಿಂದೆ ಇದ್ದ ದರವನ್ನೇ ಮುಂದುವರಿಸಿಕೊಂಡು ಹೋಗಲು ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

೧-೦೦ ಪಿ.ಎಂ

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಗಳು).—ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯೂಡಿ ೮೯ ಎನ್‌ಪಿಸಿ ೮೫ (ಪಿ-೨) ದಿ. ೩೧-೧೨-೮೯ ರಂತೆ ನೀರಾವರಿ ದರಗಳನ್ನು ಪುನರ್ವಿಮರ್ಶಿಸಿ ದಿನಾಂಕ ೧. ೧ ೯೯ ರಿಂದ ಜಾರಿಗೆ ಬರುವಂತೆ ಆದೇಶವನ್ನು ಹೊರಡಿಸಲಾಗಿದೆ. ಕರ್ನಾಟಕ ನೀರಾವರಿ (ನೀರಿನ ದರ) ನಿಯಮಾವಳಿ, ೧೯೭೩ಕ್ಕೆ ಅವಶ್ಯಕ ತಿದ್ದುಪಡಿಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದೆಂದು ಈ ಆದೇಶದಲ್ಲಿ ತಿಳಿಸಲಾಗಿತ್ತು.

ಉದ್ದೇಶಿತ ತಿದ್ದುಪಡಿಗಳನ್ನೊಳಗೊಂಡ ಕರಡು ಅಧಿಸೂಚನೆಯನ್ನು ದಿ: ೨.೨.೯೦ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ ದಿ. ೧೫-೩-೯೦ ರೊಳಗಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿತ್ತು. ಈ ಅಧಿಸೂಚನೆಯ ಮೇರೆಗೆ ಸಾರ್ವಜನಿಕರಿಂದಲೂ ರೈತರಿಂದಲೂ ಸಂಘ ಸಂಸ್ಥೆಗಳಿಂದಲೂ ಆಕ್ಷೇಪಣೆಗಳು ಮತ್ತು ಸಲಹೆಗಳು ಸ್ವೀಕೃತವಾಗಿದ್ದು ಈ ಆಕ್ಷೇಪಣೆಗಳು; ಸಲಹೆಗಳು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿವೆ, ಆದುದರಿಂದ ಕರ್ನಾಟಕ ನೀರಾವರಿ (ನೀರಾವರಿ ವಿಧಿಸುವಿಕೆ) ನಿಯಮಾವಳಿ ೧೯೭೩ಕ್ಕೆ ತಿದ್ದುಪಡಿಮಾಡಲಾದ ಅಂತಿಮ ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಈವರೆವಿಗೆ ಹೊರಡಿಸಿರುವುದಿಲ್ಲ. ಈ ಕಾರಣದಿಂದ ಪುನರ್ವಿಮರ್ಶಿತ ನೀರಿನದರಗಳು ಇನ್ನೂ ಜಾರಿಗೆ ಬಂದಿರುವುದಿಲ್ಲ.

ಆದರೂ ಸಹ, ಈ ವಿಷಯದ ಬಗ್ಗೆ ಸ್ಪಷ್ಟನೆ ನೀಡುವ ಸಲುವಾಗಿ, ಸರ್ಕಾರವು ಅಂತಿಮ ತೀರ್ಮಾನ ತೆಗೆದುಕೊಂಡು ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸುವವರೆವಿಗೂ ಸರ್ಕಾರದ ಹಿಂದಿನ ಆದೇಶ ಸಂಖ್ಯೆ ಆರ್ ೩೫ ಇ.ಡಬ್ಲ್ಯೂ ಆರ್ ೮೩ ದಿ:೨೪.೭.೮೫ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ ಪಿಡಬ್ಲ್ಯೂಡಿ ೮೯ ಎನ್‌ಪಿಸಿ ೮೫ (ಪಿ) ದಿ: ೪.೧೦.೮೭ರಲ್ಲಿ ನಿಗದಿಗೊಳಿಸಲಾಗಿರುವ ಹಿಂದಿನ ನೀರಿನದರಗಳನ್ನೇ ವಿಧಿಸಬೇಕೆಂದು ಸರ್ಕಾರದ ಸುತ್ತೋಲೆ ಸಂಖ್ಯೆ ಪಿಡಬ್ಲ್ಯೂಡಿ ೮೯ ಎನ್‌ಪಿಸಿ ೮೫ (ಪ—೨) ದಿ: ೧೧-೩-೯೦ರಲ್ಲಿ ಸೂಚನೆ ನೀಡಲಾಗಿದೆ.

ಈ ಸುತ್ತೋಲೆಯು ಪ್ರತಿಗಳನ್ನು ನೀರಾವರಿ ಇಲಾಖೆಯ ಎಲ್ಲಾ ಮುಖ್ಯ ಎಂಜಿನಿಯರುಗಳಿಗೂ ರೆವಿನ್ಯೂ ವಿಭಾಗದ ಎಲ್ಲಾ ವಿಭಾಗಾಧಿಕಾರಿಗಳಿಗೂ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಕಳುಹಿಸಿಕೊಡಲಾಗಿದೆ. ನೀರಾವರಿ ಮತ್ತು ಕಂದಾಯ ಇಲಾಖೆಗಳ ಎಲ್ಲಾ ಅಧಿಕಾರಿಗಳ ಗಮನಕ್ಕೆ ಈ ಸೂಚನೆಗಳನ್ನು ತರಬೇಕೆಂದೂ ಆದೇಶಿಸಲಾಗಿದೆ.

೫. ಕೋಣನೂರಿನ ಪ್ರಥಮ ದರ್ಜೆಕಾಲೇಜು ಪ್ರಾಂಶುಪಾಲರ ಮೇಲೆ ವಿಚಾರಣೆ

ಶ್ರೀ ಎ. ಟಿ. ರಾಮಸ್ವಾಮಿ (ಅರಕಲಗೂಡು) —ಮಾನ್ಯ ಅಧ್ಯಕ್ಷರೆ, ಅರಕಲಗೂಡು ತಾಲೂಕಿನ ಕೋಣನೂರಿನ ಬಿ. ಎಂ ಶೆಟ್ಟಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು ಇದೇ ತಿಂಗಳು ೮ನೇ ತಾರೀಖು ಕಾಲೇಜಿನಿಂದ ಅನಧಿಕೃತವಾಗಿ ಗೈರು ಹಾಜರಾಗಿದ್ದಾಗ್ಯೂ, ಹಾಜರಿ

ಪುಸ್ತಕದಲ್ಲಿ ೧೫-೩-೯೦ರವರೆಗೆ ರುಜು ಹಾಕಿದ್ದು ಈ ಬಗ್ಗೆ ವಿಚಾರಣಾಧಿಕಾರಿಯವರಿಂದ ವಿಚಾರಣೆ ನಡೆದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸದರಿ ಪ್ರಾಂಶುಪಾಲರ ಮೇಲೆ ಸರಕಾರ ಕ್ರಮವನ್ನೇನಾದರೂ ಕೈಕೊಂಡಿದೆಯೇ? ಇವರ ಗೈರು ಹಾಜರಿ ಹಾಗೂ ಬೇರೆ ಯಾರಿಗೂ ಕರ್ತವ್ಯ ನಿರ್ವಹಿಸುವ ಬಗ್ಗೆ ಅಧಿಕೃತವಾಗಿ ತಿಳಿಸದೆ ಹಾಜರಿ ಪುಸ್ತಕದಲ್ಲಿ ಸಹಿ ಮಾಡಿರುವ ಬಗ್ಗೆ ಕ್ರಮ ಕೈಕೊಳ್ಳುವರೆ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ಕೋಣನೂರಿನ ಶ್ರೀ ಬಿ. ಎಂ. ಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು ದಿನಾಂಕ ೯-೩-೯೦ ರಿಂದ ೧೨-೩-೯೦ರವರೆಗೆ ಗೈರು ಹಾಜರಾಗಿದ್ದರೂ ಸಹ ಆ ಅವಧಿಯಲ್ಲಿ ಹಾಜರಿ ಪುಸ್ತಕದಲ್ಲಿ ಸಹಿ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ತನಿಖೆ ನಡೆಸಲಾಗಿದೆ. ಆದರ ಪ್ರಕಾರ ಸದರಿ ಪ್ರಾಂಶುಪಾಲರ ವಿರುದ ದ ಆಪಾದನೆ ಸತ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ, ಸಲ್ಲಿಸಿರುವ ವರದಿಯನ್ನು ಪರಿಶೀಲಿಸಿ ನಿಯಮಗಳ ಪ್ರಕಾರ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ನಾನು ಎರಡು ಗಮನ ಸೆಳೆಯುವ ಸೂಚನೆಗಳನ್ನು ಕಳುಹಿಸಿದ್ದೆ, ಆದರ ಬಗ್ಗೆ ಏನೂ ಪ್ರಸ್ತಾಪ ಇಲ್ಲ.

ಅಧ್ಯಕ್ಷರು.—ನನ್ನ ಛೇಂಬರ್‌ನಲ್ಲಿ ಈ ವಿಷಯದ ಬಗ್ಗೆ ಮೀಟ್ ಮಾಡಿ.
ಈಗ ಸಭೆಯು ಎದ್ದು ಮತ್ತೆ ೨ ಗಂಟೆಗೆ ಪ್ರಾರಂಭವಾಗುತ್ತದೆ.

(ಸಭೆಯು ೧೧ಗಂಟೆ ೦೪ನಿಮಿಷಕ್ಕೆ ಮುಂಕ್ಕಾಯವಾಗಿ ಮತ್ತೆ ೨ ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)

(ಸಭೆಯು ೨—೨೫ ಗಂಟೆಗೆ ಪುನ: ಸಮಾವೇಶಗೊಂಡಿತು)

(ಅಧ್ಯಕ್ಷರು ಶ್ರೀ ಎಸ್. ಎಂ. ಕೃಷ್ಣ ಅವರು ಪೀಠವನ್ನು ಅಲಂಕರಿಸಿದರು)

ANNOUNCEMENT

ಅಧ್ಯಕ್ಷರು:—ಮೊದಲು ನಾನು ಹಿಂದಿ ಸಂದೇಶವನ್ನು ಸಭೆಯ ಗಮನಕ್ಕಾಗಿ ಓದುತ್ತೇನೆ.

I have received a message from Her Majesty the Queen, Head of the Commonwealth in connection with the Commonwealth Day which was observed on 12th March, 1990. The message is as follows;

EVERY Year, when we celebrate Commonwealth Day, it reminds me that we are celebrating something which is quite unique. Nothing quite like the Commonwealth has ever been created or evolved before. Its Comparative lack of rules, its human richness and its geographical diversity, make the Commonwealth as hard to define as it is easy to criticise.

The members of any family, and that is what the Commonwealth most nearly resembles, will vary widely in age, appearance, tastes, talents and temperament. From time to time they will hold some very different opinions. yet members of a family have no difficulty in recognising each other as relations, and in putting value upon their kinship. They are able to sum one another up with both realism and affection. They appreciate each other's special qualities Above all, they have learned to feel at home with each other. So have we in the commonwealth.

It is a feature of our association that we learn from each other and influence each other, but do not expect to agree on everything all the time. In the last resort, there is no compulsion to conform.